ಶ್ರೀ ಎಂ. ಎಸ್. ಕೃಷ್ಣನ್.—ಈ ಖರ್ಚಿನಲ್ಲಿ ಅತಿಥಿ ನತ್ಯಾರಕ್ಕೆ ಮಾಡುವ ಖರ್ಚೂ ಸೇರಿದೆಯೇ ? ಅದರ ಪರ್ಸೆಂಟೇಜ್ ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಅವಕ್ಕೇ ಪ್ರತ್ಯೇಕ ಇಲಾಖೆಯಿದೆ. ಬೇಕಾದಾಗ ಆ ಇಲಾಖೆಗೆ ಹೇಳಿಕಳಿಸಿದರೆ ಅವರು ಏರ್ಪಾಡುಮಾಡುತ್ತಾರೆ.

Sri K. H. PATIL.—May I know whether this expenditure includes the expenditure that is involved in maintaining the Chief Minister's house towards supply of furniture by the Public Works Department ?

Sri VEERENDRA PATIL.—No, Sir.

ಶ್ರೀ ಬಿ. ದೊಡ್ಡಬೋರೇಗೌಡ.—ನವೆಂಬರಿನಲ್ಲಿ ಮಂತ್ರಿಗಳು, ಸ್ಪೇಷ್ ಮಂತ್ರಿಗಳು ಮತ್ತು ಉಪಮಂತ್ರಿಗಳು ತೆಗೆದುಕೊಂಡಿರುವ ಟಿ.ಎ. ಮತ್ತು ಡಿ.ಎ. ಹಣವೆಷ್ಟು ಎಂದು ಹೇಳಲು ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಟಿ.ಎ. ಮತ್ತು ಡಿ.ಎ. ಪ್ರಶ್ನೆ ಇದರಲ್ಲಿ ಅಡಕವಾಗಿಲ್ಲ ಎಂದು ಆಗಲೇ ಹೇಳಿದೆ.

Sanction of Sub-transmission Line in Chikkaballapur Taluk

542. Sri K. M. PUTTASWAMY (Chikkaballapur).—

Will the Chief Minister be pleased to state :—

(*a*) when the Sub-Transmission Line from Avalagurki to Yirramarenahalli, *via* Kethenahalli, etc., was sanctioned in Chikkaballapur taluk after observing the required formalities ;

(*b*) if so, when the work was started, whether the line has been drawn as per the sanctioned estimate up to Yirramarenahalli ;

(*c*) whether the Ryots of Kethenahalli, etc., have been requesting to supply power for Irrigation Pump Sets ;

(*d*) the distance between Chikkaballapur and Kethenahalli ?

Sri D. PARAMESHWARAPPA (Deputy Minister for Major Irrigation and Electricity).—

(*a*) In 1964.

(*b*) The work was started during June 1967 and the line has been drawn up to Ittappanahalli.

(*c*) Yes.

(*d*) 10 miles.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಚಿಕ್ಕಬಳ್ಳಾಪುರದಿಂದ ಕೇತೇನಹಳ್ಳಿಗೆ 10 ಮೈಲು ಇದೆ, 1964ರಲ್ಲಿ ಕೆಲಸ ಮಂಜೂರುಮಾಡಿ 1967ರಲ್ಲಿ ಕೆಲಸ ಪ್ರಾರಂಭಿಸಿ 3 ವರ್ಷಗಳಲ್ಲಿ 3 ಮೈಲು ಲೈನ್ ಎಳೆಯಲಾಗಿದೆ. ಉಳಿದಿರುವುದನ್ನು ಯಾವಾಗ ಮಾಡಲಾಗುವುದು ?

ಶ್ರೀ ಡಿ. ಪರಮೇಶ್ವರಪ್ಪ.—ಅಲ್ಲಿ ಐ.ಪಿ. ಸೆಟ್ಟುಗಳು ಏನಿವೆ ಅವಕ್ಕೆ ಬರುವ ಅಪ್ಲಿಕೇಷನ್ ಗಳನ್ನು ನೋಡಿಕೊಂಡು ಸಬ್-ಟ್ರಾನ್ಸ್‌ಮಿಷನ್ ಲೈನ್ ಎಳೆಯುವ ಕೆಲಸವನ್ನು ಮಾಡಲಾಗುವುದು, ಬಹಳ ಮಟ್ಟಿಗೆ ಈ ಆಧಾರದಮೇಲೆ ಕೆಲಸ ನಡೆಯುವುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೇತೇನಹಳ್ಳಿಯವರು ಐ.ಪಿ. ಸೆಟ್ಟುಗಳಿಗೆ ಅಪ್ಲಿಕೇಷನ್ ಕೊಟ್ಟಿದ್ದಾರೆ, ನೀವು ಒಪ್ಪಿದ್ದೀರಾ ? ಈ ಐ.ಪಿ. ಸೆಟ್ಟುಗಳಿಗೆ ಅವಕಾಶ ಕೊಟ್ಟರೆ ಆಹಾರದ ಅಭಾವವನ್ನು ನೀಗಿಸಿ ಜನರಿಗೆ ಅನುಕೂಲಮಾಡಬಹುದು. ಆದುದರಿಂದ ಜಾಗ್ರತೆ ಲೈನು ಎಳೆಯುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಲೈನು ಎಳೆಯಬೇಕಾದರೆ ಲೋಡ್ ಸಾಕಾದಷ್ಟಿರಬೇಕು. ಕೊನೆಯ ಪಕ್ಷ 150 ಐ.ಪಿ. ಸೆಟ್ಟುಗಳಿಗಾದರೂ ಅಪ್ಲಿಕೇಷನ್‌ಗಳು ಬಂದರೆ ಜಾಗ್ರತೆ ಲೈನು ಎಳೆಯಬಹುದು. ಇದುವರೆಗೆ ಹೆಚ್ಚು ಅಪ್ಲಿಕೇಷನ್‌ಗಳು ಬಂದಿಲ್ಲ. ಕೊನೆಯ ಪಕ್ಷ ಲಾಭ ಮತ್ತು ನಷ್ಟವಿಲ್ಲದೆ ಸಾಕಷ್ಟು ಅಪ್ಲಿಕೇಷನ್‌ಗಳು ಬಂದರೆ ಲೈನು ಎಳೆಯಬಹುದು. ಈ ರೀತಿ ಇರುವುದರಿಂದ ಮಾನ್ಯ ಸದಸ್ಯರು ಈ ಭಾಗದಲ್ಲಿ ಆಸಕ್ತಿವಹಿಸಿ ಸಾಕಷ್ಟು ಅಪ್ಲಿಕೇಷನ್‌ಗಳು ಬರುವ ಹಾಗೆ ಮಾಡಿದರೆ ಕೆಲಸ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ರೈತರು ಪಂಪ್ ಸೆಟ್ಟುಗಳನ್ನು ರೂಂಗಳಲ್ಲಿ ಇಟ್ಟುಕೊಂಡು ಕರೆಂಟ್ ಇಲ್ಲದೆ ಪೂಜೆ ಮಾಡುತ್ತಾ ಇದ್ದಾರೆ. ಈಗ ಮೂರು ಮೈಲಿ ಆಗಿದೆ, ದಯವಾಡಿ ಇನ್ನು 7 ಮೈಲಿ ಲೈನ್ ಎಳೆಸಿಕೊಟ್ಟು ರೈತರಿಗೆ ಸಹಾಯ ಮಾಡಿಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪಂಪ್ ಸೆಟ್ಟುಗಳನ್ನು ಹಾಕಿಕೊಂಡು ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದರೆ ಜಾಗ್ರತೆ ಲೈನ್ ಎಳೆಸಿಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಪಂಪ್‌ಸೆಟ್ ಸ್ಯಾಂಕ್ಷನ್ ಮಾಡಬೇಕಾದರೆ ಅದಕ್ಕೆ ಮೊದಲೇ ಪವರ್ ಲೈನ್ ಪೂರ್ತಿಯಾಗಿರಬೇಕು. ಈಗ ಪಂಪ್ ಸೆಟ್ಟುಗಳನ್ನು ತಂದು ಮನೆಯಲ್ಲಿಟ್ಟುಕೊಂಡು ಅವರು ಬಡ್ಡಿ ಕಟ್ಟುತ್ತಾ ಇದ್ದಾರೆ. ಇನ್ನು 7 ಮೈಲಿ ಎಳೆಯಲು ತಾಪತ್ರಯ ಪಡುವುದಕ್ಕೆ ಕಾರಣವೇನು ?

ಶ್ರೀ ಡಿ. ಪರಮೇಶ್ವರಪ್ಪ.—ಪಂಪ್ ಬಿಟ್ಟುಗಳನ್ನು ಮನೆಯಲ್ಲಿಟ್ಟುಕೊಂಡಿದ್ದಾರೆ ಎಂದು ಹೇಳುವುದನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಪಂಪ್‌ಸೆಟ್ ತೆಗೆದು ಕೊಂಡಮೇಲೆ ಜಾಗ್ರತೆ ಅದನ್ನು ಬಾವಿಗೆ ಹಾಕಿ ಕಂಪ್ಲೀಷನ್ ರಿಪೋರ್ಟ್ ಕೊಡಬೇಕು, ಮತ್ತು ಒಂದೊಂದು ಭಾಗದಲ್ಲಿ ಒಂದೊಂದು ಕಂಪ್ಲೀಷನ್ ರಿಪೋರ್ಟ್ ಬಂದರೆ ಅರೆವ್ಯೂನರೇಟೀವ್ ಆಗುತ್ತದೆ. ಒಬ್ಬನಿಗಾಗಿ 4–5 ಮೈಲಿ ಲೈನ್ ಎಳೆಯುವುದಕ್ಕಾಗುವುದಿಲ್ಲ. ಆ ಭಾಗದಲ್ಲಿ 10–12 ಪಂಪ್ ಸೆಟ್ಟುಗಳು ರೆಡಿಯಾಗಿ ಕಂಪ್ಲೀಷನ್ ರಿಪೋರ್ಟ್ ಕೊಟ್ಟರೆ ಜಾಗ್ರತೆ ಮಾಡುವುದಕ್ಕಾಗುತ್ತದೆ.

Facilities to Graduate Primary School Teachers of Bombay Karnataka Areas

633. **Sri K. P. NADAGOUDA** (Mudhol).—

Will the Minister for Education be pleased to state :—

(*a*) the number of trained graduate teachers serving in the Primary Schools in Bombay Karnatak area who were promoted and posted as Assistant Teachers in various High Schools in Karwar District and as on transfer on 8th June 1967 ;

(*b*) their basic salary when they were serving in School Boards of four districts in Bombay Karnataka area ;

(*c*) whether they have been given any increment or special benefits after they became Assistant Teachers in High School in North Kanara District ?